**2**

ಆರೇಳು ತಿಂಗಳ ಹಿಂದೆ ಒಂದು ದಿನ ಪೇಪರಿನಲ್ಲಿ, ಕನ್ನಡದ 'ನಾನು ಅವನಲ್ಲ ಅವಳು' ಚಿತ್ರದಲ್ಲಿನ ಮಂಗಳಮುಖಿ ಪಾತ್ರದ ಅಭಿನಯಕ್ಕೆ ಸಂಚಾರಿ ವಿಜಯ್ ಅವರಿಗೆ ಅತ್ಯುತ್ತಮ ನಟ ಎಂದು ರಾಷ್ಟ್ರ ಪ್ರಶಸ್ತಿ ಬಂದದ್ದನ್ನು ವಿವರವಾಗಿ ಓದಿ ಭರ್ಜರಿ ಖುಷಿಯಾಗಿದ್ದಳು. ಕನ್ನಡದ ನಟನಿಗೆ ಎಷ್ಟೋ ವರ್ಷಗಳಾದ ಮೇಲೆ ಈ ಪ್ರಶಸ್ತಿ ಬಂದಿದೆ ಎಂಬ ವಿಷಯಕ್ಕೆ ಪತ್ರಿಕೆಯಲ್ಲಿ ಹೆಚ್ಚು ಒತ್ತುಕೊಟ್ಟಿದ್ದರೆ, 'ಮಂಗಳಮುಖಿ' ಪಾತ್ರಕ್ಕೆ ಎಂಬ ಅಂಶಕ್ಕೆ ರಾಧಾ ಹೆಚ್ಚು ಒತ್ತುಕೊಟ್ಟಳು.

ಬಹುತೇಕ ಸಿನಿಮಾಗಳಲ್ಲಿ ಮಂಗಳಮುಖಿಯರನ್ನು ಯಾವುದೋ ಶುಭ ಸಂದರ್ಭದ ಮುನ್ಸೂಚನೆಯೆಂಬಂತೆ ಅಥವಾ ನಾವು ಮಂಗಳಮುಖಿಯರು ಎಂದು ಹೇಳಿಕೊಂಡು ಮೋಸ ಮಾಡುತ್ತಿರುವ ಖಳರನ್ನು ನಾಯಕ ಹೇಗೆ ಮಟ್ಟ ಹಾಕುತ್ತಾನೆ ಅಥವಾ ನಾಯಕ ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಮಂಗಳಮುಖಿಯರಿಗೆ ಹೇಗೆ ಬದುಕುವ ದಾರಿ ತೋರಿಸುತ್ತಾನೆ ಎಂಬುವುದನ್ನು ಹೇಳುವುದಕ್ಕೆ ಬಳಸಿಕೊಳ್ಳಲಾಗುತ್ತಿದ್ದುದನ್ನು ಕಂಡಿದ್ದ ರಾಧಾಳಿಗೆ ಈ ಸುದ್ದಿ ಭಯಂಕರ ಖುಷಿಕೊಟ್ಟಿತು. ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಎಲ್ಲಾ ನ್ಯೂಸ್ ಚಾನಲ್ಲು, ಪೇಪರ್ರುಗಳಲ್ಲಿ ಇದೇ ಸುದ್ದಿಯ ಇನ್ನಷ್ಟು ವಿವರಗಳನ್ನು ತಿಳಿದು ಸಂಭ್ರಮಿಸಿದಳು.

ಕೆಲ ದಿನಗಳ ಹಿಂದೆ ನಗರದೆಲ್ಲೆಡೆ ಅಂಟಿಸಿದ ಅದೇ 'ನಾನು ಅವನಲ್ಲ ಅವಳು' ಪೋಸ್ಟರುಗಳನ್ನು ಕಂಡು ಕಾದಳು. ಬೆಂಗಳೂರಲ್ಲಿ ಬಿಡುಗಡೆಯಾಗಿ ಒಂದು ತಿಂಗಳ ನಂತರ ಈ ಊರಲ್ಲಿ ಚಿತ್ರ ಬಿಡುಗಡೆಯಾಯಿತು. ರಾಧಾ ಮೊದಲ ದಿನವೇ ಹೋಗಿ ಸಿನಿಮಾ ನೋಡಿಕೊಂಡು ಬಂದಳು. ಹುಡುಗನೊಬ್ಬ ಬೆಳೆಯುತ್ತಾ ಹೆಣ್ಣಿನ ಭಾವಗಳನ್ನು ತಾಳಿ ಹೇಗೆ ತನ್ನ ಮನೆಯವರ ನಿರ್ಲಕ್ಷಕ್ಕೆ ಒಳಗಾದ? ಹೇಗೆ ಸುತ್ತಲಿನ ಸಮಾಜವನ್ನು ದಿಟ್ಟತನದಿಂದ ಎದುರಿಸಿ ಹೆಣ್ಣಾಗಿ ತನ್ನ ಬದುಕನ್ನು ಕಟ್ಟಿಕೊಂಡ? ಎಂಬುದನ್ನು ಸೊಗಸಾಗಿ ತೋರಿಸಲಾಗಿತ್ತು.

ಹೊರ ಬಂದ ರಾಧಾ ರಸ್ತೆಯನ್ನು ಮತ್ತು ಒಂದೇ ಸಮನೇ ಚಲಿಸುತ್ತಿರುವ ವಾಹನಗಳನ್ನೂ ನೋಡುತ್ತಾ, 'ಇದು ನನ್ ಕಥೀನೇ. ಹುಟ್ತಾ ನಾನೂ ಹುಡ್ಗ ಆಗೇ ಇದ್ದೆ, ಬೆಳೀತಾ ಎಲ್ರೂ 'ಹೆಣ್ಣಿಗ' ಅಂತ ಕೂಗಾಕತ್ತಿ 'ಗಂಡ್ಸಂಗಿರು' ಅಂತ ಅನ್ನಾಕತ್ತಿದ್ರು. ದಿನಾ ದಿನಾ ಮನಿಯವ್ರಿಗೆಲ್ಲಾ ಚಿಂತಿ ಹತ್ತಿದ್ರೂ ಹೇಳ್ಕೆಣಲಿಲ್ಲ. ಅಪ್ಪ ಅವ್ವ ತಂಗೀ ಮಕಾ ನೋಡಿ, 'ನಾನ್ ಇನ್ಮ್ಯಾಲೆ ಗಂಡ್ಸಾಗಿ ಇರ್ಬೇಕು' ಅಂತ ಬರೀ ಬಾಯಾಗ ಹೇಳಾಕ ಆಯ್ತು ಆದ್ರೆ ಮಾಡಾಕಾಗ್ಲಿಲ್ಲ. 'ನನ್ನಿಂದ ಯಾಕ ಮನಿಯೋರಿಗೆ ಕಷ್ಟ?' ಅಂದ್ಕಂಡೇ ನಾನೂ ಮನೀ ಬಿಟ್ಟ್ ಬಂದು 'ಮೋಹನ' ಆಗಿದ್ದೋನು ಬದ್ಲು 'ರಾಧಾ' ಆಗಿದ್ದು' ಎಂಬ ಗೊಣಗುತ್ತಾ ಗತದ ಚಿತ್ರಗಳನ್ನು ನೆನಪಿಗೆ ತಂದುಕೊಂಡು ನಿಟ್ಟುಸಿರು ಬಿಟ್ಟಿದ್ದಳು.

ದಿನೇ ದಿನೇ ಸಿನಿಮಾ ಸುದ್ದಿ ಜೋರಾದಂತೆ ಸಿಗ್ನಲ್ಲಿನಲ್ಲಿ ತನ್ನನ್ನು ಕಂಡು ಕೆಲ ಬೈಕು ಸವಾರರು, ಕಾರಿನವರು ತಲೆ ತಪ್ಪಿಸುತ್ತಿಲ್ಲ ಎಂಬುದನ್ನು ಗಮನಿಸಿದವಳಿಗೆ ಎಲ್ಲರೂ ಸಿನಿಮಾ ನೋಡಿದ್ದಾರೆ ಎನ್ನಿಸಿ ಬದುಕಿನ ಯಾವುದೋ ಬೇಜಾರು ಸ್ವಲ್ಪ ಕಡಿಮೆಯಾದಂತೆನಿಸಿತು. 'ಕನ್ನಡ ಸಿನಿಮಾ ಫಸ್ಟ್ ಡೇ ಫಸ್ಟ್ ಶೋ' ಹುಚ್ಚಿನ ರಾಧಾಳ ಹುಚ್ಚು ಇನ್ನೂ ಹೆಚ್ಚಾಗಿ ತನ್ನಂತಹವರನ್ನೆಲ್ಲಾ ಎಳೆದುಕೊಂಡು ಹೋಗಿ ಆ ಸಿನಿಮಾ ತೋರಿಸಿ ಖುಷಿಪಟ್ಟಳು.

**3**

ಅಪ್ಪನ ಕೊನೆಯ ತಮ್ಮ ರಮೇಶ ಅಂದರೆ ಸಣ್ಣ ಚಿಕ್ಕಪ್ಪ ಅಥವಾ ಕಕ್ಕಪ್ಪನೇ ಅವಳ ಸಿನಿಮಾ ಹುಚ್ಚಿನ ಮೂಲ. ಬೇಸಿಗೆ ರಜೆಗೆ ಅಜ್ಜಿ ಮನೆ ಸೇರಿದ ದಿನದಿಂದ ವಾಪಸ್ಸಾಗುವವರೆಗೆ